**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ ನಂ. 1041/2022**

| | | | |
|---|---|---|---|
| **ಹೆಸರು** | **:** | **ರಾಜಕುಮಾರ** | **ಚಾ.ಸಾ.3** |
| **ತಂದೆಯ ಹೆಸರು** | **:** | **ಬಸವರಾಜ** | **ಪ್ರಾ.ಸಾ.2** |
| **ವಯಸ್ಸು** | **:** | **30 ವರ್ಷ** | **ದಿನಾಂಕಃ 19-06-2023** |
| **ಉದ್ಯೋಗ** | **:** | **ಒಕ್ಕಲುತನ** | |
| **ವಾಸಸ್ಥಳ** | **:** | **ಮುಕರಂಬಾ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ನನಗೆ ಆರೋಪಿ ಗೊತ್ತು. ನನಗೆ ಪ್ರಾಸಾ-1, ಚಾಸಾ-2, ಚಾಸಾ-4 ರಿಂದ  ಚಾಸಾ-14 ರವರು ಗೊತ್ತು. ಮೃತ ಶಿವಕುಮಾರ ನನ್ನ ಗ್ರಾಮಸ್ಥ. ಮೃತ ಶಿವಕುಮಾರ ವಿದ್ಯೂತ ತಗಲಿದ್ದರಿಂದ ಮೃತಪಟ್ಟಿರುತ್ತಾರೆ.

ದಿನಾಂಕಃ 22-01-2022 ರಂದು ಮಧ್ಯಾಹ್ನ 1.30 ರಿಂದ 2.00 ಗಂಟೆ ಸುಮಾರಿಗೆ ನಾನು ಊರಲ್ಲಿದ್ದ ಬಜಾರನಲ್ಲಿ ಇದ್ದಾಗ ರಾಜಶೇಖರರವರು ಮೃತ ಶಿವಕುಮಾರರವರಿಗೆ ಹೊಲವನ್ನು ಗುತ್ತಿಗೆ ಕೊಟ್ಟಿದ್ದರು. ಸದರಿ ಹೊಲ ನಮ್ಮ ಗ್ರಾಮದ ಹತ್ತಿರದಲ್ಲಿ ಇದೆ. ಚೀರುವ ಶಬ್ದ ಕೇಳಿ ಚಾಸಾ-2, ಚಾಸಾ-4 ಮತ್ತು ಇನ್ನಿತರರು ಒಟ್ಟು ಏಳು ಜನರು ಹೋಲದಲ್ಲಿ ಹೋಗಿ ನೋಡಿದಾಗ ಮೃತ ಶಿವಕುಮಾರ ವಿದ್ಯೂತ ವೈಯರ ಕೆಳಗಡೆ ಬಿದ್ದಿದ್ದರು. ನಾವು ಹೋಗಿ ನೋಡುವಷ್ಟರಲ್ಲಿ ಶಿವಕುಮಾರ ಮೃತಪಟ್ಟಿದ್ದ. ವಿದ್ಯೂತ ತಗಲಿದ ಕಾರಣ ಮೃತ ಶಿವಕುಮಾರರವರ ಎರಡು ಕೈಗಳ ಚರ್ಮ ಕಿತ್ತಿ ಹೋಗಿತ್ತು. ವಿದ್ಯೂತ ವೈಯರಗಳು ನೆಲದಿಂದ ಮೂರು ಪೀಟ ಅಂತರದಲ್ಲಿ ಜೋಗಿ ಬಿದಿದ್ದವು. ನಂತರ ನಾವು ಶಿವಕುಮಾರರವರ ತಂದೆ ತಾಯಿಗೆ ಸಮಾಧಾನ ಮಾಡಿ ಪೊಲೀಸರಿಗೆ ಘಟನೆ ಬಗ್ಗೆ ತಿಳಿಸಿದ್ದೇವೆ. ವಿದ್ಯೂತ ಅಧಿಕಾರಿಗಳು, ಗ್ರಾಮ ಲೆಕ್ಕಾಧಿಕಾರಿಗಳು ಸಹ ಹೊಲಕ್ಕೆ ಬಂದಿದ್ದರು. ನಾವು ಗ್ರಾಮಸ್ಥರು ಎಲ್ಲರು ಸೇರಿ ಜೆ.ಇ. ರವರಾದ ಆರೊಪಿಯ ತಪ್ಪಿನಿಂದ ಆಗಿದೆ ಎಂದು ಹೇಳಿದ್ದೇವೆ.

ಸುಮಾರು 4-5 ವರ್ಷಗಳಿಂದ ವಿದ್ಯೂತ ವೈರಗಳು ಜೋತು ಬಿದಿದ್ದು, ಆರೋಪಿಗೆ ಸುಮಾರು ಬಾರಿ ತೆಗೆಯಲು ಹೇಳಿದರೂ ಸಹ ಯಾವದೇ ಕ್ರಮ ಕೈಕೊಂಡಿರಲಿಲ್ಲ. ಸುಮಾರು 4-5 ವರ್ಷಗಳಿಂದ ಸದರಿ ವೈಯರಗಳಲ್ಲಿ ವಿದ್ಯೂತ ಸಂಪರ್ಕ ಇರಲಿಲ್ಲ. ಮೃತ ಶಿವಕುಮಾರ ಮೃತಪಟ್ಟಾಗ ಸದರಿ ವೈಯರಗಳಲ್ಲಿ ವಿದ್ಯೂತ ಸಂಪರ್ಕ ಇತ್ತು.

ನಂತರ ಶಿವಕುಮಾರರವರ ಮೃತ ದೇಹವನ್ನು ಪರೀಕ್ಷೆಗಾಗಿ ಕಾಳಗಿ ಸರಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದಾರೆ. ನಂತರ ಪೊಲೀಸ ಠಾಣೆಯಲ್ಲಿ ಪ್ರಾಸಾ-1 ರವರು ಆರೋಪಿಯ ವಿರುದ್ದ ದೂರನ್ನು ನೀಡಿದ್ದಾರೆ. ಘಟನೆ ನಡೆದ ಮರುದಿನ ಪಿ.ಎಸ.ಐ.ರವರು ಮಧ್ಯಾಹ್ನ 2.30 ರಿಂದ 3.00 ಗಂಟೆ ಸುಮಾರಿಗೆ ಘಟನೆ ನಡೆದ ಹೊಲದಲ್ಲಿ ಬಂದು ಪಂಚನಾಮೆಯನ್ನು ಮಾಡಿದ್ದಾರೆ.

ಈಗ ನೋಡುತ್ತಿರುವ ಎರಡು ಭಾವಚಿತ್ರಗಳು ಘಟನಾ ಸ್ಥಳದ ಹೊಲವಾಗಿರುತ್ತದೆ. ಸದರಿ ಭಾವಚಿತ್ರಗಳಲ್ಲಿ ಒಂದು ಭಾವಚಿತ್ರ ಈಗಾಗಲೆ ನಿಪಿ-3 ಎಂದು ಗುರುತಿಸಲಾಗಿದೆ. ಮತ್ತು ಇನ್ನೊಂದು ಭಾವಚಿತ್ರವನ್ನು ನಿಪಿ-4 ಎಂದು ಗುರುತಿಸಲಾಯಿತು. ನಿಪಿ-3 ರ ಭಾವಚಿತ್ರದಲ್ಲಿ ಇರುವ ವಿದ್ಯೂತ ವೈಯರ ಕೆಳಗಡೆ ಮೃತ ಶಿವಕುಮಾರ ಮೃತಪಟ್ಟಿದ್ದ. ಘಟನೆಯ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎಸ್.ಎ.ಪಿ. . ವಕೀಲರು ಸಮಯ ಕೋರಿದ್ದರಿಂದ ರೂ.500/- ಖರ್ಚು ಕೊಡುವಂತೆ ಆದೇಶಿಸಿ ಮುಂದೂಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**